**ಓ.ಎಸ್. ನಂಃ 178/2020**

**ಪಿ.ಡಬ್ಲ್ಯೂಃ 2**

**ದಿನಾಂಕ 10.12.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಪಾಟೀ ಸವಾಲುಃ 1 ರಿಂದ 3 ನೇ ಪ್ರತಿವಾದಿಯರ ಪರ ಶ್ರೀ.ಬಿ.ಕೆ.ಎನ್.ವಕೀಲರಿಂದಃ**

1. ನನ್ನ ಊರು ನಾಡಪ್ಪನಹಳ್ಳಿ ಕೊಪ್ಪಲು. ಈ ದಾವೆಯನ್ನು ವಾದಿ ಹೂಡಿಸಿರುತ್ತಾರೆ. ಈ ದಾವೆಯನ್ನು ಹೂಡಲು ಮಾಹಿತಿಯನ್ನು ವಾದಿ ಕೊಟ್ಟಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ತಯಾರಿಸಲು ವಾದಿಯು ಮಾಹಿತಿಯನ್ನು ನೀಡಿರುತ್ತಾರೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆದಿರುವ ವಿಷಯಗಳನ್ನು ನಾನು ತಿಳಿದುಕೊಂಡಿರುತ್ತೇನೆ. ಈ ಹಿಂದೆ ಪ್ರತಿವಾದಿಯರು ಹೂಡಿದ್ದ ದಾವೆ ವಜಾಗೊಂಡಿದ್ದರು ಸಹ ಪ್ರತಿವಾದಿಯರು ವಿನಾಕಾರಣ ದಾವಾ ಆಸ್ತಿಗೆ ಬಂದು ವಾದಿಗೆ ತೊಂದರೆ ಕೊಟ್ಟ ಕಾರಣ, ಪ್ರತಿವಾದಿಯರು ದಾವಾ ಆಸ್ತಿಗೆ ಬಂದು ತೊಂದರೆ ಕೊಡಬಾರದು ಎಂದು ಶಾಶ್ವತ ನಿರ್ಭಂಧಕಾಜ್ಞೆ ಕೋರಿ ವಾದಿಯು ಈ ದಾವೆಯನ್ನು ಹೂಡಿರುತ್ತಾರೆ.

2. ವಾದಿಯು ಪ್ರತ್ಯೇಕ ವಿಭಾಗ ಮತ್ತು ಸ್ವಾಧೀನ ಕೋರಿ ಈ ದಾವೆಯನ್ನು ಹೂಡಿರುತ್ತಾರೆ ಎಂದು ನನ್ನ ಮುಖ್ಯ ವಿಚಾರಣೆಯ ಮೊದಲನೆಯ ಕಂಡಿಕೆಯಲ್ಲಿ ನಮೂದಾಗಿರುತ್ತದೆ ಎಂದರೆ ಸರಿ. ಸದರಿ ವಿಷಯವು ಸತ್ಯದಿಂದ ಕೂಡಿದೆ ಎಂದರೆ ಸರಿ. ಇಡೀ ದಾವಾ ಆಸ್ತಿಯು ಪೂರ್ತಿಯಾಗಿ ವಾದಿಗೆ ಸಲ್ಲಬೇಕಾಗಿರುತ್ತದೆ. ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರದಲ್ಲಿ ಬರೆಸಿರುವ ವಿಷಯಗಳ ಬಗ್ಗೆ ನನಗೆ ಮಾಹಿತಿ ಇಲ್ಲ ಎಂದರೆ ಸರಿಯಲ್ಲ.

3. ದಾವಾ ಆಸ್ತಿಯು ವಾದಿಯ ತಂದೆಯಾದ ರಾಮಶೆಟ್ಟಿರವರ ಹೆಸರಿನಲ್ಲಿದೆ. ವಾದಿಯ ತಂದೆಯಾದ ರಾಮಶೆಟ್ಟಿರವರಿಗೆ ಒಟ್ಟು 2 ಜನ ಗಂಡು ಮಕ್ಕಳು ಮತ್ತು 4 ಜನ ಹೆಣ್ಣು ಮಕ್ಕಳು ಇರುತ್ತಾರೆ. ಈ ದಾವೆಯಲ್ಲಿ ರಾಮಶೆಟ್ಟಿರವರ ಉಳಿದ ಮಕ್ಕಳನ್ನು

ಪಕ್ಷಗಾರನ್ನಾಗಿ ಮಾಡಿರುವುದಿಲ್ಲ ಎಂದರೆ ಸರಿ. ದಾವಾ ಆಸ್ತಿಯು ವಾದಿಯ ತಂದೆಯಾದ ರಾಮಶೆಟ್ಟಿರವರ ಎಲ್ಲಾ ಮಕ್ಕಳಿಗೂ ಸೇರಿದ ಆಸ್ತಿ ಎಂದರೆ ಸರಿ.

4. ದಾವಾ ಆಸ್ತಿಯನ್ನು ಕಾಳೇಗೌಡ ಬಿನ್ ಮುತ್ತೇಗೌಡರವರಿಂದ ವಾದಿಯ ಅಜ್ಜಿಯಾದ ದೊಡ್ಡತಾಯಮ್ಮ ಕೋಂ.ಅಪ್ಪಾಜಿಶೆಟ್ಟಿರವರು ದಿನಾಂಕ 16.04.1955 ರಂದು ಖರೀದಿಸಿರುತ್ತಾರೆ. ದಿನಾಂಕ 16.04.1955 ರ ಕ್ರಯ ಪತ್ರದಲ್ಲಿ ದಾವಾ ಆಸ್ತಿಯ ಅಸೆಸ್‌ಮೆಂಟ್ ಮತ್ತು ಡಿಮಾಂಡ್ ರಿಜಿಸ್ಟರ್ ನ ಸಂಖ್ಯೆ ನಮೂದಾಗಿರುತ್ತದೆ. ನಾನು ಹೇಳಿದ ಪ್ರಕಾರ ದಿನಾಂಕ 16.04.1955 ರ ಕ್ರಯ ಪತ್ರದಲ್ಲಿ ದಾವಾ ಆಸ್ತಿಯ ಅಸೆಸ್‌ಮೆಂಟ್ ಮತ್ತು ಡಿಮಾಂಡ್ ರಿಜಿಸ್ಟರ್ ನ ಸಂಖ್ಯೆ ನಮೂದಾಗಿರುವುದಿಲ್ಲ ಎಂದರೆ ಸರಿಯಲ್ಲ.

5. ದಾವಾ ಆಸ್ತಿಯ ಮಾರಾಟಗಾರನಾದ ಕಾಳೇಗೌಡ ಬಿನ್ ಮುತ್ತೇಗೌಡರವರು ದಾವಾ ಆಸ್ತಿಯ ಮಾಲೀಕರಾಗಿದ್ದರು ಎಂದು ತೋರಿಸಲು ಪಂಚಾಯಿತಿ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ನಾನು ಹೇಳಿದ ಪ್ರಕಾರ ಕಾಳೇಗೌಡ ಬಿನ್ ಮುತ್ತೇಗೌಡರವರು ಎಂದಿಗೂ ಸಹ ದಾವಾ ಆಸ್ತಿಯ ಮಾಲೀಕರಾಗಿರದ ಕಾರಣ ದಾವಾ ಆಸ್ತಿಯನ್ನು ವಾದಿಯ ಅಜ್ಜಿಯಾದ ದೊಡ್ಡತಾಯಮ್ಮರವರಿಗೆ ಮಾರಾಟ ಮಾಡುವ ಹಕ್ಕು ಸದರಿ ಕಾಳೇಗೌಡರಿಗೆ ಇರಲಿಲ್ಲ ಎಂದರೆ ಸರಿಯಲ್ಲ. ದೊಡ್ಡತಾಯಮ್ಮ ಕೋಂ.ಅಪ್ಪಾಜಿಶೆಟ್ಟಿ ರವರು ವಾದಿಯ ಅಜ್ಜಿ ಎಂದು ತೋರಿಸಲು ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ.

6. ದಾವಾ ಆಸ್ತಿಯ ಚೆಕ್ಕುಬಂಧಿ ದೃಡೀಕರಣ ಪತ್ರವನ್ನು ಪಂಚಾಯಿತಿ ಅಧಿಕಾರಿಗಳಿಂದ ಪಡೆದು ನ್ಯಾಯಾಲಯಕ್ಕೆ ಹಾಜರುಪಡಿಸಲು ನನಗೆ ಯಾವುದೇ ತೊಂದರೆ ಇಲ್ಲ. ದಾವಾ ಆಸ್ತಿಯು ಪ್ರತಿವಾದಿಯರಿಗೆ ಸಂಬಂದಪಡದ ಆಸ್ತಿ ಆಗಿದ್ದರು ಸಹ ಪ್ರತಿವಾದಿಯರು ದಾವಾ ಆಸ್ತಿಯ ಸಂಬಂಧ ಅಸಲು ದಾವೆ ಸಂಖ್ಯೆ 105/2014 ರ ದಾವೆಯನ್ನು ಹೂಡಿದ್ದರು. ಅಸಲು ದಾವೆ ಸಂಖ್ಯೆ 105/2014 ರ ದಾವೆಯನ್ನು ಈ ದಾವೆ ಆಸ್ತಿಯ ಸಂಬಂಧ ಹೂಡಿರಲಿಲ್ಲ ಎಂದರೆ ಸರಿಯಲ್ಲ.

7. ದಾವಾ ಆಸ್ತಿಯು ಖಾಲಿ ನಿವೇಶನವಾಗಿದ್ದು, ಈ ದಾವೆಯನ್ನು ಹೂಡುವ ಪೂರ್ವದಲ್ಲಿ ಪ್ರತಿವಾದಿಯರು ಕಾನೂನು ಬಾಹಿರವಾಗಿ ದಾವಾ ಆಸ್ತಿಯಲ್ಲಿ ಅಡಿಪಾಯವನ್ನು ಹಾಕಿರುತ್ತಾರೆ. ಸದರಿ ವಿಷಯವನ್ನು ವಾದ ಪತ್ರದಲ್ಲಿ ನಮೂದಿಸಲು ಏನಾದರು ತೊಂದರೆ ಇತ್ತಾ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಸದರಿ ವಿಷಯವನ್ನು ವಾದಿಯು ವಾದ ಪತ್ರದಲ್ಲಿ ಹೇಳಿ ಬರೆಸಿರುತ್ತಾರೆ ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯ ಒಂದು ಮೂಲೆಯಲ್ಲಿ ಪ್ರತಿವಾದಿಯರು ಅಡಿಪಾಯವನ್ನು ಹಾಕಿರುತ್ತಾರೆ. ದಾವಾ ಆಸ್ತಿಯಲ್ಲಿ ಪ್ರತಿವಾದಿಯರು ಹಾಕಿದ ಅಡಿಪಾಯವನ್ನು ನಾವು ಅಳತೆ ಮಾಡಿಸಿರುವುದಿಲ್ಲ.

8. ದಾವಾ ಆಸ್ತಿಯ ವಿಸ್ತೀರ್ಣ ಪೂರ್ವ-ಪಶ್ಚಿಮ 53 ಅಡಿ ಹಾಗೂ ದಕ್ಷಿಣೋತ್ತರವಾಗಿ 48 ಅಡಿ ಇದೆ. ದಿನಾಂಕ 16.04.1955 ರ ಕ್ರಯ ಪತ್ರದಲ್ಲಿ ಇರುವ ದಾವಾ ಆಸ್ತಿಯ ಚೆಕ್ಕುಬಂಧಿಯನ್ನು ಹೇಳುವಂತೆ ಸಾಕ್ಷಿಗೆ ಸೂಚಿಸಿದ್ದು, ಪೂರ್ವಕ್ಕೆ-ಕರೀಗೌಡನ ಮಗ ಜವರೇಗೌಡನ ಮನೆ, ಪಶ್ಚಿಮಕ್ಕೆ-ಸಣ್ಣದೇವೇಗೌಡರ ಖಾಲಿ ನಿವೇಶನ, ಉತ್ತರಕ್ಕೆ-ಬಹುತ್ವದ ದಾರಿ ಹಾಗೂ ದಕ್ಷಿಣಕ್ಕೆ-ರಸ್ತೆ ಇದೆ. ನಾನು ಈಗ ಹೇಳಿದ ದಾವಾ ಆಸ್ತಿಯ ಚೆಕ್ಕುಬಂಧಿಯನ್ನು ಸಹ ವಾದ ಪತ್ರದಲ್ಲಿ ತೋರಿಸಿರುತ್ತಾರೆ. ಸಾಕ್ಷಿಯು ಮುಂದುವರೆದು ನಾನು ಮೇಲೆ ಹೇಳಿದ ಪಶ್ಚಿಮ, ಉತ್ತರ ಹಾಗೂ ದಕ್ಷಿಣ ದಿಕ್ಕಿನ ಚೆಕ್ಕುಬಂಧಿ ಕ್ರಯ ಪತ್ರದಲ್ಲಿ ನಮೂದಿಸಿರುವಂತೆಯೇ ಇದ್ದು, ಕ್ರಯ ಪತ್ರದಲ್ಲಿ ದಾವಾ ಆಸ್ತಿಯ ಪೂರ್ವಕ್ಕೆ ಇದ್ದ ಕರೀಗೌಡನ ಮಗ ಜವರೇಗೌಡನ ಮನೆಯನ್ನು ವಾದಿಯ ಅಜ್ಜಿಯಾದ ದೊಡ್ಡತಾಯಮ್ಮ ರವರು ಖರೀದಿಸಿದ್ದು, ನಂತರದಲ್ಲಿ ಸದರಿ ಹಳೆಯ ಮನೆಯನ್ನು ಒಡೆದು ಹಾಕಿ ಬ್ಯಾರೇನ್ ಮನೆಯನ್ನು ನಿರ್ಮಿಸಿ ಸದರಿ ಬ್ಯಾರೇನ್ ಮನೆಯನ್ನು ವಾದಿಯ ತಂದೆಯಾದ ರಾಮಶೆಟ್ಟಿರವರ ಹೆಸರಿಗೆ ಖಾತೆ ವರ್ಗಾವಣೆ ಆಗಿದ್ದು, ದಾವಾ ಆಸ್ತಿಯ ಪೂರ್ವಕ್ಕೆ ಇದ್ದ ಕರೀಗೌಡನ ಮಗ ಜವರೇಗೌಡನ ಮನೆಯು ಪ್ರಸ್ತುತ ಬ್ಯಾರೇನ್ ಮನೆಯಾಗಿ ವಾದಿಯ ತಂದೆಯಾದ ರಾಮಶೆಟ್ಟಿರವರ ಹೆಸರಿನಲ್ಲಿರುತ್ತದೆ ಎಂದು ಸ್ವತಃ ನುಡಿದಿರುತ್ತಾರೆ.

9. ದಿನಾಂಕ 16.04.1955 ರ ಕ್ರಯ ಪತ್ರದಲ್ಲಿ ದಾವಾ ಆಸ್ತಿಯನ್ನು ಗಜದ ಲೆಕ್ಕದಲ್ಲಿ ಖರೀದಿಸಿರುತ್ತಾರೆ. ದಾವಾ ಆಸ್ತಿಯ ಕ್ರಯ ಪತ್ರವನ್ನು ಮತ್ತು ಕಂದಾಯ ರಸೀದಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇವೆ. ದಾವಾ ಆಸ್ತಿಯ ಕಂದಾಯ ರಸೀದಿ ವಾದಿಯ ತಂದೆಯಾದ ರಾಮಶೆಟ್ಟಿರವರ ಹೆಸರಿನಲ್ಲಿರುತ್ತದೆ. ನಿಪಿ.3 ರ ದಾಖಲೆಯು

ದಾವಾ ಆಸ್ತಿಗೆ ಸಂಬಂಧಪಟ್ಟ ದಾಖಲೆ ಆಗಿರುತ್ತದೆ. ನಿಪಿ.3 ರಲ್ಲಿ ದಾವಾ ಆಸ್ತಿಯ ವಿಸ್ತೀರ್ಣ 24 X 48 ಅಡಿ ಎಂದು ನಮೂದಾಗಿರುತ್ತದೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು 24 X 48 ಅಡಿ ನಿವೇಶನದ ಜೊತೆಗೆ ಸದರಿ ನಿವೇಶನದ ಪಶ್ಚಿಮ ಭಾಗದಲ್ಲಿ ಉಳಿದುಕೊಂಡಿದ್ದ ಖಾಲಿ ಜಾಗವು ವಾದಿಯ ಅಜ್ಜಿಯಾದ ದೊಡ್ಡತಾಯಮ್ಮರವರ ಹೆಸರಿಗೆ ಕ್ರಯವಾಗಿದ್ದ ಕಾರಣ 24 X 48 ಅಡಿ ನಿವೇಶನದ ಜೊತೆಗೆ ಸದರಿ ನಿವೇಶನದ ಪಶ್ಚಿಮ ಭಾಗದಲ್ಲಿ ಉಳಿದುಕೊಂಡಿದ್ದ ಸದರಿ ಖಾಲಿ ಜಾಗವನ್ನು ಸೇರಿಸಿಕೊಂಡಂತೆ ಈ ದಾವೆಯನ್ನು ಹೂಡಿರುತ್ತೇವೆ.

10. ನಿಪಿ.3 ರ ದಾಖಲೆಯಲ್ಲಿ 340 ರೂಪಾಯಿ ಮನೆ ತೆರಿಗೆ ಹಾಗೂ 603 ರೂಪಾಯಿ ನಿವೇಶನದ ತೆರಿಗೆ ಪಾವತಿಸಿರುವುದಾಗಿ ನಮೂದಾಗಿರುತ್ತದೆ ಎಂದರೆ ಸರಿ. ನಿಪಿ.6 ರ ದಾಖಲೆಯಲ್ಲಿ ಮನೆ ತೆರಿಗೆ ಪಾವತಿಸಿರುವುದಾಗಿ ನಮೂದಾಗಿರುತ್ತದೆ ಎಂದರೆ ಸರಿ. ನಿಪಿ.3 ಮತ್ತು ನಿಪಿ.6 ರ ದಾಖಲೆಗಳ ಪ್ರಕಾರ ದಾವಾ ಆಸ್ತಿಯು ಖಾಲಿ ನಿವೇಶನ ಅಲ್ಲ ಬದಲಾಗಿ ದಾವಾ ಆಸ್ತಿಯು ಮನೆ ಎಂದು ನಮೂದಾಗಿರುತ್ತದೆ ಎಂದರೆ ಸರಿಯಲ್ಲ.

11. ದಿನಾಂಕ 16.04.1955 ರ ಕ್ರಯ ಪತ್ರದಲ್ಲಿ ದಾವಾ ಆಸ್ತಿಯ ಅಸೆಸ್‌ಮೆಂಟ್ ಮತ್ತು ಡಿಮಾಂಡ್ ರಿಜಿಸ್ಟರ್ ನ ಸಂಖ್ಯೆ ನಮೂದಾಗದಿದ್ದರು ಸಹ ನಮೂದಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ದಿನಾಂಕ 16.04.1955 ರ ಕ್ರಯ ಪತ್ರದ ಆದಾರದ ಮೇಲೆ ದಾವಾ ಆಸ್ತಿಯನ್ನು ವಾದಿಯ ಹೆಸರಿಗೆ ಖಾತೆ ವರ್ಗಾವಣೆ ಮಾಡಿಸಿಕೊಂಡಿರುವುದಿಲ್ಲ ಎಂದು ಸೂಚಿಸಿದ ಪ್ರಶ್ನೆಗೆ ಸಾಕ್ಷಿಯು ಈ ಹಿಂದೆ ದಾವಾ ಆಸ್ತಿಯ ಸಂಬಂಧ ನ್ಯಾಯಾಲಯದಲ್ಲಿ ದಾವೆ ನಡೆಯುತ್ತಿದ್ದ ಕಾರಣ ಸದರಿ ದಾವೆಯಲ್ಲಿ ಅಂತಿಮ ತೀರ್ಪು ಬಂದ ನಂತರ ದಾವಾ ಆಸ್ತಿಯ ಖಾತೆಯನ್ನು ವರ್ಗಾವಣೆ ಮಾಡಿಸಿಕೊಳ್ಳುವುದಾಗಿ ಯೋಚಿಸಿ ದಾವಾ ಆಸ್ತಿಯನ್ನು ವಾದಿಯ ಹೆಸರಿಗೆ ಖಾತೆ ವರ್ಗಾವಣೆ ಮಾಡಿಸಿಕೊಂಡಿರುವುದಿಲ್ಲ ಎಂದು ಸಾಕ್ಷಿಯು ನುಡಿದಿರುತ್ತಾರೆ. ಅಸಲು ದಾವೆ ಸಂಖ್ಯೆ 105/2014 ರ ದಾವೆಯು ವಜಾ ಆದ ಬಳಿಕ ದಾವಾ ಆಸ್ತಿಯನ್ನು ದೊಡ್ಡತಾಯಮ್ಮರವರ ಹೆಸರಿನಿಂದ ವಾದಿಯ ತಂದೆಯಾದ ರಾಮಶೆಟ್ಟಿರವರ ಹೆಸರಿಗೆ ಖಾತೆ ವರ್ಗಾವಣೆ ಮಾಡಿಸಿಕೊಳ್ಳಲು ಅರ್ಜಿಯನ್ನು ಸಲ್ಲಿಸಿದ್ದು, ಆದರೆ ಪಂಚಾಯಿತಿ ಅಧಿಕಾರಿಗಳು ಅಸಲು ದಾವೆ ಸಂಖ್ಯೆ 105/2014 ರ ದಾವೆಯು ಇನ್ನೂ ಸಹ ಮುಕ್ತಾಯಗೊಂಡಿರುವುದಿಲ್ಲ ಎಂದು

ಹೇಳಿ ದಾವಾ ಆಸ್ತಿಯ ಖಾತೆ ವರ್ಗಾವಣೆಯನ್ನು ತಡೆಹಿಡಿದಿದ್ದು, ಅದಾದ ನಂತರದಲ್ಲಿ ಪ್ರತಿವಾದಿಯರು ದಾವಾ ಆಸ್ತಿಯಲ್ಲಿ ಅಕ್ರಮವಾಗಿ ಅಡಿಪಾಯ ಹಾಕಿದ್ದು, ಕಾರಣ ನ್ಯಾಯಾಲಯದಲ್ಲಿಯೇ ಎಲ್ಲಾ ಸಮಸ್ಯೆಗಳನ್ನು ಬಗೆಹರಿಸಿಕೊಳ್ಳಬಹುದು ಎಂದು ತೀರ್ಮಾನಿಸಿ ದಾವಾ ಆಸ್ತಿಯ ಖಾತೆ ವರ್ಗಾವಣೆಯ ವಿಚಾರವನ್ನು ನಾವು ಮುಂದುವರೆಸಿರುವುದಿಲ್ಲ. ದಾವಾ ಆಸ್ತಿಯ ಖಾತೆ ವರ್ಗಾವಣೆ ಕೋರಿ ಪಂಚಾಯಿತಿಗೆ ಸಲ್ಲಿಸಿದ ಅರ್ಜಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಹುದು.

12. ನಿಪಿ.3 ಮತ್ತು ನಿಪಿ.6 ರ ದಾಖಲೆಗಳು ದಾವಾ ಆಸ್ತಿಗೆ ಸಂಬಂಧಪಡದ ದಾಖಲೆಗಳು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಿಪಿ.3 ಮತ್ತು ನಿಪಿ.6 ಇವು ದಾವಾ ಆಸ್ತಿಯ ಹಳೆಯ ಪಂಚಾಯಿತಿ ದಾಖಲೆಗಳು ಎಂದು ನುಡಿದಿರುತ್ತಾರೆ. ದಾವಾ ಆಸ್ತಿಯ ವಿಸ್ತೀರ್ಣ 53 X 48 ಇದೆ ಎಂದು ತೋರಿಸಲು ನಾನುಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ಎಲ್ಲಾ ಪ್ರತಿವಾದಿಯರು ನಮಗೆ ತೊಂದರೆ ಕೊಟ್ಟ ಕಾರಣ ನಾವು ಅವರ ವಿರುದ್ಧ ಈ ದಾವೆಯನ್ನು ಹೂಡಿರುತ್ತೇವೆ. ಪ್ರತಿವಾದಿಯರು ದಾವಾ ಆಸ್ತಿಗೆ ಬಂದು ನಮಗೆ ತೊಂದರೆ ಕೊಟ್ಟಿರುತ್ತಾರೆ ಎಂದು ಪ್ರತಿವಾದಿಯರ ವಿರುದ್ಧ ನಾವು ಪೋಲಿಸ್ ಠಾಣೆಯಲ್ಲಿ ದೂರನ್ನು ನೀಡಿದ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಆ ರೀತಿ ನಾನು ಯಾವುದೇ ದಾಖಲೆಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ.

**ಪ್ರತಿವಾದಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗಾಗಿ ಕಾಲಾವಕಾಶ ಕೋರಿದ್ದು, ಕಾಲಾವಕಾಶ ನೀಡಲಾಯಿತು.**

( ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು. )

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**